ಶ್ರೀ. ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :

ಅ) ಹೌದು

ಆ) ಸಂಪನ್ಮೂಲಗಳ ಅಭಾವದಿಂದ ಎಲ್ಲಾ ಸ್ಥಳಗಳಲ್ಲಿ ಬಸ್‌ನಿಲ್ದಾಣವನ್ನು ನಿರ್ಮಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸಾಧ್ಯವಾಗಿರುವುದಿಲ್ಲ. ವಿಟ್ಲ ಪಟ್ಟಣವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಕೃತವಲ್ಲದ ವಲಯದಲ್ಲಿದೆ. ಇಲ್ಲಿನ ಸಾರಿಗೆ ಅವಶ್ಯಕತೆಗಳನ್ನು ಬಹುತೇಕವಾಗಿ ಖಾಸಗೀಯವರು ಪೂರೈಸುತ್ತಿದ್ದಾರೆ. ಆದುದರಿಂದ ವಿಟ್ಲದಲ್ಲಿ ಬಸ್‌ನಿಲ್ದಾಣವನ್ನು ಕೊಡಲೇ ನಿರ್ಮಿಸುವ ಯೋಜನೆ ಸಧ್ಯಕ್ಕೆ ಇಲ್ಲ.

ಕೃಷಿ ಸಮಸ್ಯೆಗಳ ಪರಿಹಾರಕ್ಕೆ ವಿಶೇಷ ಘಟಕ

496 - ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಶೀಘ್ರವಾಗಿ ಪರಿಶೀಲಿಸುವುದೆಂದು ಕೃಷಿ ಸಚಿವರು ನವೆಂಬರ್ 1999 ರಂದು ಹೇಳಿಕೆ ನೀಡಿದ್ದು ನಿಜವೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು?

ಶ್ರೀ. ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :

ಅ) ರೈತರಿಗೆ ಉತ್ತಮ ಸೇವೆ ನೀಡಲು ಫರಂ ಕ್ಲಿನಿಕ್ ರೈತರು ಸ್ಪಂದಿಸುವ ಕೇಂದ್ರಗಳನ್ನು ಸ್ಥಾಪಿಸಲಾಗುವುದೆಂದು ಘೋಷಿಸಲಾಗಿತ್ತು.

ಆ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯಲ್ಲಿ ಬಗರ್ ಹುಕುಂ ಸಾಗುವಳಿ

497 - ಶ್ರೀ. ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯಲ್ಲಿ ನಗರದ 18 ಕಿ.ಮೀ. ಒಳಗೆ ಬಗರ್‌ಹುಕುಂ ಸಾಗುವಳಿ ಮಾಡಿರುವವರ ಸಂಖ್ಯೆ ಮತ್ತು ವಿಸ್ತೀರ್ಣ ಎಷ್ಟು?

ಆ) ಈ ಪೈಕಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗ ಮತ್ತು ಇತರೆಯವರು ಒತ್ತುವರಿ ಮಾಡಿರುವ ಜಮೀನಿನ ವಿಸ್ತೀರ್ಣ ಎಷ್ಟು?

ಇ) 18 ಕಿ.ಮೀ. ವ್ಯಾಪ್ತಿಯೊಳಗೆ ಬಗರ್ ಹುಕುಂ ಸಕ್ರಮಗೊಳಿಸಲು ಅವಕಾಶವಿಲ್ಲದ್ದರಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರೂ ಸೇರಿದಂತೆ ಎಲ್ಲಾ ಬಗರ್ ಹುಕುಂ ಸಾಗುವಳಿ ದಾರರು ಸಲ್ಲಿಸಿದ್ದ ನಮೂನೆ - 50 ಹಾಗೂ 53ನ್ನು ತಿರಸ್ಕರಿಸಿರುವುದು ನಿಜವೇ?

ಈ) ಹಾಗಿದ್ದಲ್ಲಿ ತಿರಸ್ಕರಿಸಿದ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ)	ಅರ್ಜಿಗಳ ಸಂಖ್ಯೆ	ವಿಸ್ತೀರ್ಣ (ಎಕರೆ)
	11,453	19,798.39

ಆ) ಅರ್ಜಿಗಳ ಸಂಖ್ಯೆ

ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ		ಇತರರು	
ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ
4,843	7,549.16	6,610	12,249.23

ಇ) ಹೌದು

ಈ) 11,453

ಆಸ್ತಿ ನೋಂದಣಿ ಶುಲ್ಕ ಕಡಿತ ಪರಿಶೀಲನೆ ಭರವಸೆ

499 - ಶ್ರೀ ಜಗದೀಶ್ ಷೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಮೂರು ವರ್ಷಗಳಲ್ಲಿ ವಸೂಲಿಯಾದ ನೋಂದಣಿ ಶುಲ್ಕ ಎಷ್ಟು?

2) ನೋಂದಣಿ ಶುಲ್ಕವನ್ನು ಕಳೆದ ಮೂರು ವರ್ಷಗಳಲ್ಲಿ ಪುನರ್ ವಿಮರ್ಶಿಸಲಾದ ದಿನಾಂಕಗಳು ಯಾವುವು?

3) ಆಸ್ತಿ ನೋಂದಣಿ ಶುಲ್ಕ ಕಡಿಮೆ ಮಾಡಲು ಸರ್ಕಾರ ಪರಿಶೀಲಿಸುತ್ತಿದೆಯೇ?

4) ಮುದ್ರಾಂಕ ಶುಲ್ಕ ಅಧಿಕಾರವಾಗಿರುವುದರಿಂದ ನೋಂದಣಿ ಹಾಗೂ ಮುದ್ರಾಂಕಗಳಿಂದ ಬರುವ ಆದಾಯ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

1) ರಾಜ್ಯದಲ್ಲಿ ಮೂರು- ವರ್ಷಗಳಲ್ಲಿ ವಸೂಲಿಯಾದ ನೋಂದಣಿ ಶುಲ್ಕದ ವಿವರ ಈ ಕೆಳಕಂಡಂತಿದೆ :

ಕ್ರ.ಸಂ.	ವರ್ಷ	ವಸೂಲಾದ ನೋಂದಣಿ ಶುಲ್ಕ
		(ರೂ.ಕೋಟಿಗಳಲ್ಲಿ)
1.	1997-98	94.01
2.	1998-99	147.41
3.	1999-2000 (ಫೆಬ್ರವರಿ 2000ದ ಅಂತ್ಯಕ್ಕೆ)	99.96